# ಕೃಷಿ ಭಾಗ್ಯ ಯೋಜನೆ

ಮಳೆ ಆಶ್ರಿತ ರೈತರನ್ನು ಕೇಂದ್ರೀಕರಿಸಿ ಮಳೆ ನೀರು ಸಂಗ್ರಹಣೆ ಮತ್ತು ಪುನರ್ ಬಳಕೆಗೆ ಆದ್ಯತೆ ನೀಡಿ ಕೃಷಿ ಭಾಗ್ಯ ಯೋಜನೆಯನ್ನು 2014-15 ಸಾಲಿನಿಂದ ಜಾರಿಗೆ ತರಲಾಗಿದೆ. ಈ ಯೋಜನೆಯನ್ನು ಮೊದಲನೆ ಹಂತದಲ್ಲಿ 5 ಮುಖ್ಯ ಒಣ ಭೂಮಿ ವಲಯಗಳ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಮತ್ತು 2015-16 ನೇ ಸಾಲಿನಿಂದ ಕಡಿಮೆ ಮಳೆ ಬೀಳುವ ತಾಲ್ಲೂಕುಗಳನ್ನು ಸೇರ್ಪಡೆ ಮಾಡಿ ಒಟ್ಟು 25 ಜಿಲ್ಲೆಗಳ 132 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾದೆ. 2017-18 ನೇ ಸಾಲಿನಿಂದ ಯೋಜನೆಯ ಸೌಲಭ್ಯವನ್ನು, ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು:**

ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು.

2014-15 ನೇ ಸಾಲಿನಿಂದ 2016-17 ಸಾಲಿನವರೆಗೆ ಯೋಜನೆಯನ್ನು **ಪ್ಯಾಕೇಜ್ ರೂಪದಲ್ಲಿ** ಅನುಷ್ಠಾನಗೊಳಿಸಲಾಗಿದ್ದು, ಈ ಕೆಳಕಂಡಂತೆ ಘಟಕಗಳ ಸೌಲಭ್ಯ ನೀಡಲಾಗಿರುತ್ತದೆ.

ಅ)ಕೃಷಿ ಹೊಂಡ ಘಟಕ: ಕೃಷಿ ಹೊಂಡ, ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿಗಳು, ಡಿಸೇಲ್ ಪಂಪ್ ಸೆಟ್, ಲಘು ನೀರಾವರಿ ಘಟಕ, ಕ್ಷೇತ್ರ ಬದು, ಬೆಳೆ ಪದ್ಧತಿ, ಪಶು ಸಂಗೋಪನಾ ಚಟುವಟಿಕೆ(ಐಚ್ಛಿಕ ಘಟಕ).

ಆ) ಪಾಲಿಹೌಸ್ ಘಟಕ: ಪಾಲಿಹೌಸ್/ನರಳು ಪರದೆ ಮನೆ.

ಮುಂದುವರೆದು, 2015-16 ನೇ ಸಾಲಿನಿಂದ ಕೃಷಿ ಭಾಗ್ಯ ಯೋಜನೆಯ ಅಂಗವಾಗಿ ಕಳೆದ ನಾಲ್ಕು ವರ್ಷಗಳಿಂದ ನಿರಂತರ ಬರಕ್ಕೆ ತುತ್ತಾದ 7 ಜಿಲ್ಲೆಗಳ (ಕೋಲಾರ್, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಬೀದರ್, ಹಾಸನ ಮತ್ತು ಕಲಬುರ್ಗಿ), 23 ತಾಲ್ಲೂಕುಗಳಲ್ಲಿ ವಿಶೇಷ ಪ್ಯಾಕೇಜ್‌ನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2016-17 ನೇ ಸಾಲಿನಲ್ಲಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಘಟಕಗಳನ್ನು ಅನುಷ್ಠಾನ ಮಾಡಿರುವ ಪ್ರಯುಕ್ತ, ಸದರಿ ಸಾಲಿನಿಂದ ಜಲಾನಯನ ಇಲಾಖೆಯ ಯೋಜನೆಗಳೊಂದಿಗೆ ಹಾಗೂ ಇಲಾಖೆಯ ಇತರೆ ಯೋಜನೆಗಳಡಿ(ಕೃಷಿ ಸಂಸ್ಕರಣೆ, ಕೃಷಿ ಯಾಂತ್ರೀಕರಣ ಹಾಗೂ ಸೂಕ್ಷ್ಮ ನೀರಾವರಿ ಯೋಜನೆ) ಲಭ್ಯವಿರುವ ಅನುದಾನವನ್ನು ಬಳಸಿ ಒಗ್ಗೂಡಿಸುವಿಕೆಯಡಿ ಅನುಷ್ಠಾನ ಮಾಡಲಾಯಿತು.

ಪ್ರಸಕ್ತ ಸಾಲಿನ ನೂತನ ಬಜೆಟ್‌ನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ರೂ 250.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಅಂದಾಜು 30,000 ಕೃಷಿ ಹೊಂಡಗಳನ್ನು ಹಾಗೂ ಇತರೆ ಘಟಕಗಳನ್ನು ಅನುಷ್ಠಾನಗೊಳಿಸಲು ಗುರಿ ಹಮ್ಮಿಕೊಳ್ಳಲಾಗಿದೆ.

**2018-19 ನೇ ಸಾಲಿನಲ್ಲಿ ಯೋಜನೆಯಡಿ ನೀಡಲಾಗುತ್ತಿರುವ ಸೌಲಭ್ಯಗಳ ಹಾಗೂ ಸಹಾಯಧನದ ವಿವರ**

| ಕ್ರ.ಸಂ | ಘಟಕ | ಕೃಷಿ ಭಾಗ್ಯ | | ವಿಶೇಷ ಪ್ಯಾಕೇಜ್ | |
|---|---|---|---|---|---|
| | | ಸಾಮಾನ್ಯ | ಪ.ಜಾತಿ/ ಪ.ಪಂಗಡ | ಸಾಮಾನ್ಯ | ಪ.ಜಾತಿ/ ಪ.ಪಂಗಡ |
| 1 | ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ) | 80 | 90 | 90 | 95 |
| 2 | ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ ಪರ್ಯಾಯ ಮಾದರಿಗಳು( ಗರಿಷ್ಟ ï ರೂ 50000) | 80 | 90 | 90 | 95 |
| 3 | ಹೊಂಡದಿಂದ ನೀರು ಎತ್ತಲು ಡಿಸೇಲ್ ಪಂಪ್ ಸೆಟ್ (3 to 5 ಎಚ್.ಪಿ ) | 50 | 90 | 75 | 90 |
| 4 | ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ (ಹನಿ/ತುಂತುರು) | 90 | 90 | 90 | 90 |
| 5 | ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shadenet) | 50 | 50 | 50 | 50 |
| *6 | ಕೊಳವೆ ಬಾವಿ ಮರುಪೂರ್ಣ | - | - | 90 | 95 |

* ವಿಶೇಷ ಪ್ಯಾಕೇಜ್ ಕಾರ್ಯಕ್ರಮದಡಿ ಮೇಲೆ ತಿಳಿಸಿರುವ ಎಲ್ಲಾ ಘಟಕಗಳೊಂದಿಗೆ ಕೊಳವೆ ಭಾವಿ ಮರುಪೂರ್ಣ ಘಟಕವನ್ನು ಸೇರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.